# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ರಾಜ್ಯದಲ್ಲಿ ಸಂಸ್ಕೃತ ಭಾಷೆಯ ಅನನ್ಯ ಅಧ್ಯಯನ ಮತ್ತು ಸಂಶೋಧನೆಗಾಗಿ ಸ್ಥಾಪಿತವಾಗಿದೆ. ಸಂಸ್ಕೃತ ಭಾಷೆಯು ಬಹು ಪ್ರಾಚೀನವಾದ ಮತ್ತು ಉಜ್ವಲವಾದ ವೈಜ್ಞಾನಿಕ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಸಂಪ್ರದಾಯ ಮತ್ತು ಪರಂಪರೆಗಳನ್ನು ಹೊಂದಿದೆ. ಈ ಭಾಷೆಯು ಗದ್ಯ, ಪದ್ಯ, ನಾಟಕ, ನಾಟ್ಯ, ಶಿಲ್ಪಕಲೆ, ವರ್ಣಚಿತ್ರ, ಲಲಿತಕಲೆಗಳು, ವೈದ್ಯಶಾಸ್ತ್ರ, ತತ್ತ್ವಜ್ಞಾನ ಮತ್ತು ಇತರ ಸಂಬಂಧಪಟ್ಟ ಕ್ಷೇತ್ರಗಳಲ್ಲೂ ಭಾರತೀಯ ವಿದ್ವಾಂಸರು ಈವರೆಗೆ ಸಾಧಿಸಿರುವ ಸಾಧನೆಗಿಂತಲೂ ವ್ಯಾಪಕವಾದ ಮತ್ತು ಚಿರಂತನವಾದ ಕೊಡುಗೆಯನ್ನು ನೀಡಿದೆ.

ಕರ್ನಾಟಕ ಸರ್ಕಾರದ ಬಹುಯತ್ನದ ಫಲವಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2010ರಲ್ಲಿ ಸ್ಥಾಪನೆಗೊಂಡಿತು. ಮೈಸೂರು ಮಹಾರಾಜರಿಂದ ಈ ರಾಜ್ಯದಲ್ಲಿ ಸಂಸ್ಕೃತ ಭಾಷೆ ಮತ್ತು ಸಾಹಿತ್ಯ ಅಧ್ಯಯನವು ಪ್ರೋತ್ಸಾಹವನ್ನು ಪಡೆಯಿತು. 150 ವರ್ಷಗಳ ಹಿಂದೆ ಸ್ಥಾಪನೆಗೊಂಡ ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠಶಾಲೆಯನ್ನು ಒಳಗೊಂಡಂತೆ ಕರ್ನಾಟಕದಲ್ಲಿ ಅನೇಕ ಸಂಸ್ಕೃತ ಮಹಾಪಾಠಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಹಾಗೆಯೇ, ರಾಜ್ಯದಲ್ಲಿ ನೂರಾರು ವೇದ-ಸಂಸ್ಕೃತ ಪಾಠಶಾಲೆಗಳೂ ಕ್ರಿಯಾಶೀಲವಾಗಿವೆ. ಈ ಎಲ್ಲ ಶಾಲೆಗಳನ್ನು ಒಂದು ವ್ಯವಸ್ಥೆಯಡಿ ತಂದು, ಒಂದು ಸಮಾನ ಶಿಕ್ಷಣಪದ್ಧತಿಯನ್ನು ರೂಪಿಸಿ, ರಾಷ್ಟ್ರಿಯ ಮತ್ತು ಅಂತಾರಾಷ್ಟ್ರಿಯ ಮಟ್ಟದಲ್ಲಿ ಸಂಸ್ಕೃತ ಸಂಶೋಧನೆಯ ಸ್ತರವನ್ನು ಹೆಚ್ಚಿಸಲು ವಿದ್ಯಾರ್ಥಿಗಳಿಗೆ ಮತ್ತು ಅಧ್ಯಾಪಕರಿಗೆ ಹೆಚ್ಚಿನ ಅವಕಾಶಗಳನ್ನು ಒದಗಿಸಿಕೊಡುವ ಉದ್ದೇಶ್ಯದೊಂದಿಗೆ ಈ ವಿಶ್ವವಿದ್ಯಾಲಯವು ಕಾರ್ಯಾರಂಭ ಮಾಡಿದೆ.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಪ್ರಧಾನವಾಗಿ ನಾಲ್ಕು ಅಂಗಗಳನ್ನು ಹೊಂದಿದೆ. ಅಧ್ಯಯನಾಂಗ, ಸಂಶೋಧನಾಂಗ, ಪ್ರಕಟಣಾಂಗ ಹಾಗೂ ಆಡಳಿತಾಂಗಗಳ ಮೂಲಕ ವಿಶ್ವವಿದ್ಯಾಲಯದ ಕ್ರಿಯಾಶಕ್ತಿಯನ್ನು ಉನ್ನತೀಕರಿಸಬೇಕಾಗಿದೆ. ಈ ಮೂಲಕ ವಿಶ್ವವಿದ್ಯಾಲಯವು ಕರ್ನಾಟಕದ ಸಂಸ್ಕೃತಸಂಬಂಧಿ ಚಟುವಟಿಕೆಗಳಿಗೆ ಚಾಲನೆಯನ್ನು ನೀಡಲಿದೆ.

ವಿಶ್ವವಿದ್ಯಾಲಯಕ್ಕಾಗಿ ಕುದೂರು ಹೋಬಳಿಯಲ್ಲಿ (ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ) 100 ಎಕರೆಗಳ ಭೂಮಿಯನ್ನು ಗುರುತಿಸಲಾಗಿದೆ. ಪ್ರಸ್ತುತ, ಸರ್ಕಾರಿ ಸಂಸ್ಕೃತ ಕಾಲೇಜುಗಳು, ಅನುದಾನಿತ ಕಾಲೇಜುಗಳು ಮತ್ತು ಅನುದಾನರಹಿತ ಕಾಲೇಜುಗಳು ಸೇರಿದಂತೆ ಒಟ್ಟು 21 ಸ್ನಾತಕ–ಸ್ನಾತಕೋತ್ತರ ಅಧ್ಯಯನ ಕೇಂದ್ರಗಳು ವಿಶ್ವವಿದ್ಯಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿವೆ. ವಿಶ್ವವಿದ್ಯಾಲಯವು ರಾಜ್ಯದಲ್ಲಿ ಸಂಸ್ಕೃತ ಮತ್ತು ಶಾಸ್ತ್ರಗಳ ಸಂಶೋಧನೆಗಾಗಿ ವಿವಿಧ ಸಂಶೋಧನಾ ಕೇಂದ್ರಗಳಿಗೆ ಮಾನ್ಯತೆಯನ್ನು ನೀಡುತ್ತಿದೆ. ಈ ಪ್ರಕ್ರಿಯೆ ಚಾಲನೆಯಲ್ಲಿದೆ. ಪದವಿಪೂರ್ವ ಸಂಸ್ಕೃತ ಶಿಕ್ಷಣದ ನಿರ್ವಹಣೆಗಾಗಿ ವಿಶ್ವವಿದ್ಯಾಲಯದ ಅಡಿಯಲ್ಲಿ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವನ್ನು ಸರ್ಕಾರವು ಆರಂಭಿಸಿದೆ. ನಿರ್ದೇಶನಾಲಯದಿಂದ ಅಂಗೀಕೃತವಾದ ಸುಮಾರು 300 ಪಾಠಶಾಲೆಗಳು ರಾಜ್ಯದಲ್ಲಿ ಕಾರ್ಯನಿರತವಾಗಿವೆ.

---


**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**

**ಕುಲಪತಿಗಳು**

**ಪ್ರೊ. ವೈ.ಎಸ್. ಸಿದ್ದೇಗೌಡ**

**ಕುಲಸಚಿವರು**

**ಡಾ. ಶ್ರೀನಿವಾಸ ವರಖೇಡಿ**

**ಡೀನ್, ಭಾಷಾ ನಿಕಾಯ**

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**

**ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ**

**ಬೆಂಗಳೂರು – 560018.**

**ದೂರವಾಣಿ: 080–26701303**

**e-mail: karnatakasanskrituniversity@gmail.com**

**website: www.ksu.ac.in**


# ಎಂ.ಫಿಲ್. (ವಿಶಿಷ್ಟಾಚಾರ್ಯ) ಪ್ರವೇಶ

**ಪರಿವಿಡಿ**


೧. ಎಂ.ಫಿಲ್. (ವಿಶಿಷ್ಟಾಚಾರ್ಯ) ಅಧ್ಯಯನದ ನಿಯಮಾವಳಿ

೨. ಎಂ.ಫಿಲ್. ಪ್ರವೇಶದ ವೇಳಾಪಟ್ಟಿ ಮತ್ತು ಶುಲ್ಕ ವಿವರ

೩. ಲಭ್ಯ ಸ್ಥಾನಗಳ ಸಂಖ್ಯೆ

೪. ಪ್ರವೇಶ ಪರೀಕ್ಷೆ

೫. ಎಂ.ಫಿಲ್. ಆವೇದನ ಪತ್ರ


**ವಿಶೇಷ ಸೂಚನೆಗಳು:**

೧. ವಿದ್ಯಾರ್ಥಿಗಳು ಪ್ರವೇಶ ಪರೀಕ್ಷೆಯ ದಿನಾಂಕ ಮತ್ತು ಪ್ರವೇಶ ಪರೀಕ್ಷೆ ಬರೆಯಲು ಅರ್ಹರಾದ ಬಗೆಗೆ, ಪ್ರವೇಶಕ್ಕೆ ಆಯ್ಕೆಯಾದ ಬಗೆಗೆ ಯಾವುದೇ ಬಗೆಯ ಮಾಹಿತಿಗಳನ್ನು ಅಂಚೆ ಮುಖಾಂತರ ರವಾನಿಸುವುದಿಲ್ಲ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನೋಟೀಸ್ ಬೋರ್ಡ್/ವೆಬ್‌ಸೈಟ್‌ನ್ನು ನಿಗದಿತ ದಿನಾಂಕಗಳಲ್ಲಿ ನೋಡಿ ಖಚಿತಪಡಿಸಿಕೊಳ್ಳುವುದು.

೨. ಅನಿವಾರ್ಯ ಕಾರಣಗಳಿಂದ ಪ್ರಕಟಿಸಿರುವ ದಿನಾಂಕಗಳಲ್ಲಿ ಆಗುವ ಬದಲಾವಣೆಗಳನ್ನು ಮೇಲಿಂದ ಮೇಲೆ ವಿದ್ಯಾರ್ಥಿಗಳು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವೆಬ್‌ಸೈಟ್‌ನ್ನು ನೋಡಿ ಖಚಿತಪಡಿಸಿಕೊಳ್ಳುವುದು.

೩. ಅಭ್ಯರ್ಥಿಗಳು ಭರ್ತಿ ಮಾಡಿದ ಆವೇದನ ಪತ್ರಗಳನ್ನು ಕುಲಸಚಿವರು/ನಿರ್ದೇಶಕರು, ಅಧ್ಯಯನಾಂಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು ಇವರಿಗೆ ಸಲ್ಲಿಸಬೇಕು.

# ಎಂ.ಫಿಲ್ (ವಿಶಿಷ್ಟಾಚಾರ್ಯ) ಪದವಿ ಪರಿನಿಯಮ 2011

**1. ಪ್ರಸ್ತಾವನೆ**

ಸಂಶೋಧನೆಯ ಕಾರ್ಯದಲ್ಲಿ ಎಂ.ಫಿಲ್ (ವಿಶಿಷ್ಟಾಚಾರ್ಯ) ಕಾರ್ಯಕ್ರಮವು ಮೊದಲನೆಯ ಹೆಜ್ಜೆಯೆಂದು ಪರಿಗಣಿಸಲಾಗುತ್ತದೆ. ಈ ಕಾರ್ಯಕ್ರಮವು ಸಂಶೋಧನೆಯ ಕ್ಷೇತ್ರದಲ್ಲಿ ಬೇಕಾದ ನೈಪುಣ್ಯ, ಜ್ಞಾನ ಮತ್ತು ಸಾಮರ್ಥ್ಯಗಳನ್ನು ಗಳಿಸಲು ಬೇಕಾದ ಶಿಕ್ಷಣವನ್ನು ಕೊಡುತ್ತದೆ. ಈ ಪದವಿಯು ಪಿಹೆಚ್.ಡಿ (ವಿದ್ಯಾವಾರಿಧಿ) / ಡಿ.ಲಿಟ್ (ವಿದ್ಯಾವಾಚಸ್ಪತಿ) ಎಂಬ ಉನ್ನತ ಸಂಶೋಧನಾ ಪದವಿಗಳಿಗೆ ಪೂರ್ವಭಾವಿ ಸಿದ್ಧತೆಯಾಗಿರುತ್ತದೆ.

**2. ಕಿರುಶೀರ್ಷಿಕೆ**

ಈ ನಿಯಮಾವಳಿಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಎಂ.ಫಿಲ್ (ವಿಶಿಷ್ಟಾಚಾರ್ಯ) ಪರಿನಿಯಮ 2011 ಎಂದು ಕರೆಯಬೇಕು.

**3. ಪ್ರಾರಂಭ**

ಈ ನಿಯಮಾವಳಿಯು ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಒಪ್ಪಿಗೆ ನೀಡಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ.

**4. ಪ್ರವೇಶಾರ್ಹತೆ**

4.1 ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ / ಮಾನ್ಯತೆ ಪಡೆದ ಇತರ ಸಂಸ್ಕೃತ ವಿಶ್ವವಿದ್ಯಾನಿಲಯಗಳ / ಇತರ ವಿಶ್ವವಿದ್ಯಾಲಯಗಳ ಸ್ನಾತಕೋತ್ತರ (ಸಂಸ್ಕೃತ) ಪದವಿ ಪರೀಕ್ಷೆಯಲ್ಲಿ ಕನಿಷ್ಠತಮ ಶೇ. 55 ಅಂಕಗಳನ್ನು ಪಡೆದಿರಬೇಕು. ಈ ನಿಯಮಾವಳಿಯು ಕಾಲಕಾಲಕ್ಕೆ ಬದಲಾಗಬಹುದಾದಂತಹ ಯು.ಜಿ.ಸಿ. ನಿಯಮಾವಳಿಗೆ ಒಳಪಟ್ಟಿರುತ್ತದೆ.

4.2 ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1ಕ್ಕೆ ಸೇರಿದ ಅಭ್ಯರ್ಥಿಗಳು ಶೇ. 50 ಅಂಕಗಳನ್ನು ಪಡೆದಿರಬೇಕು.

4.3 ಯುಜಿಸಿ/ಎನ್ಇಟಿ/ಎಸ್ಎಲ್ಇಟಿ/ಪ್ರವೇಶ ಪರೀಕ್ಷೆ ತೇರ್ಗಡೆ ಹೊಂದಿದ ಅಭ್ಯರ್ಥಿಗಳನ್ನು ಬಿಟ್ಟು ಮಿಕ್ಕವರು ವಿಶ್ವವಿದ್ಯಾಲಯವು ನಡೆಸುವ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

**5. ಅಭ್ಯರ್ಥಿಗಳ ಆಯ್ಕೆ**

ಅಭ್ಯರ್ಥಿಗಳ ಆಯ್ಕೆಯನ್ನು ವಿಶೇಷವಾಗಿ ರಚಿಸಿದ ಕೆಳಕಂಡ ಸದಸ್ಯರನ್ನೊಳಗೊಂಡ ಎಂ.ಫಿಲ್ (ವಿಶಿಷ್ಟಾಚಾರ್ಯ) ಸಮಿತಿಯು ಮಾಡುತ್ತದೆ.

5.1 ನಿಕಾಯದ ಡೀನ್ — ಅಧ್ಯಕ್ಷರು

5.2 ಸಂಬಂಧಪಟ್ಟ ವಿಭಾಗದ ಅಧ್ಯಕ್ಷರು — ಸದಸ್ಯ ಸಂಚಾಲಕರು

5.3 ಇಬ್ಬರು ಹಿರಿಯ ಅಧ್ಯಾಪಕರು — ಸದಸ್ಯರು
(ಪ್ರಾಧ್ಯಾಪಕರು, ಪ್ರವಾಚಕರು ಅಥವಾ ಸಹ ಪ್ರಾಧ್ಯಾಪಕರು)

ಒಂದು ವೇಳೆ ನಿಕಾಯದ ಡೀನರು ಇಲ್ಲದ ಸಂದರ್ಭದಲ್ಲಿ ಆಯಾ ವಿಭಾಗದ ಮುಖ್ಯಸ್ಥರು ಸಮಿತಿಯ ಅಧ್ಯಕ್ಷರಾಗಿರುತ್ತಾರೆ.

ಆಯ್ಕೆ ಸಮಿತಿಯು ಆಯಾಯ ನಿಕಾಯ/ವಿಭಾಗಗಳಲ್ಲಿ ಇರುವ ಸೌಲಭ್ಯಗಳಿಗೆ ಅನುಗುಣವಾಗಿ ಮತ್ತು ಮಾರ್ಗದರ್ಶಕರ ಉಪಲಬ್ಧಿಗೆ ಅನುಗುಣವಾಗಿ ಎಂ.ಫಿಲ್ (ವಿಶಿಷ್ಟಾಚಾರ್ಯ) ಕಾರ್ಯಕ್ರಮಕ್ಕೆ ಅಭ್ಯರ್ಥಿಗಳ ಸಂಖ್ಯೆಯನ್ನು ನಿರ್ಧರಿಸಬೇಕು.

**6. ಕಾರ್ಯಕ್ರಮದ ಅವಧಿ ಮತ್ತು ಸ್ವರೂಪ**

ಒಂದು ವರ್ಷ ಅಂದರೆ ಪ್ರತಿವರ್ಷ ಜುಲೈ ತಿಂಗಳಿನಿಂದ ಆರಂಭವಾಗಿ ಮುಂದಿನ ವರ್ಷದ ಜೂನ್ ತಿಂಗಳ ಕೊನೆಯವರೆಗೆ (12 ತಿಂಗಳು) ಆಗಿರುತ್ತದೆ. ಈ ಅವಧಿಯಲ್ಲಿ ಮೊದಲ ಆರು ತಿಂಗಳು ಶೈಕ್ಷಣಿಕ ಕಾರ್ಯಕ್ರಮ. ಇದರಲ್ಲಿ ಸಂಶೋಧನಾ ಪದ್ಧತಿಯ ಬಗೆಗೆ ಹಾಗೂ ಎಂ.ಫಿಲ್ ಪ್ರೌಢಪ್ರಬಂಧದ ವಿಷಯದ ಬಗೆಗೆ ಬೋಧನೆ ಮತ್ತು ಅಧ್ಯಯನ. ಅನಂತರದ ಆರು ತಿಂಗಳು ಸಂಶೋಧನ ವಿಷಯದ ಮೇಲೆ ಪ್ರಬಂಧವನ್ನು ಸಿದ್ಧಗೊಳಿಸುವುದು. ಇದನ್ನು ಕೆಳಗಿನ ತಃಖ್ತೆಯಲ್ಲಿ ನಮೂದಿಸಲಾಗಿದೆ:

| ಕಾರ್ಯಕ್ರಮದ ಅವಧಿ | ಎಂ.ಫಿಲ್ ಭಾಗ (ವಿಶಿಷ್ಟಾಚಾರ್ಯ) | ಪತ್ರಿಕೆ | ಗರಿಷ್ಠ ಅಂಕಗಳು | ಲಿಖಿತ ಆಂತರಿಕ ಮೌಲ್ಯಮಾಪನ | ಪರೀಕ್ಷಾ ಅವಧಿ |
|---|---|---|---|---|---|
| ಮೊದಲ ಆರು ತಿಂಗಳು | ಭಾಗ–1 | ಪತ್ರಿಕೆ–I ಸಾಮಾನ್ಯ: ಸಂಶೋಧನ ಪದ್ಧತಿ | 100 | 80 + 20 | 3 ಗಂಟೆ |
| | | ಪತ್ರಿಕೆ–II ವಿಶೇಷ: ಸಂಶೋಧನ ವಿಷಯ | 100 | 80 + 20 | 3 ಗಂಟೆ |
| ಎರಡನೆ ಆರು ತಿಂಗಳು | ಭಾಗ–2 | ಸಂಶೋಧನ ಪ್ರಬಂಧ<br>ಮೌಖಿಕ ಪರೀಕ್ಷೆ | 150<br>50 | –<br>– | –<br>– |
| | | **ಒಟ್ಟು** | **400** | | |

7. ಪತ್ರಿಕೆ–I ಮತ್ತು ಪತ್ರಿಕೆ–IIರ ಪರೀಕ್ಷೆಯು ಪ್ರಥಮ ಹಂತದ ಕೊನೆಯಲ್ಲಿ ನಡೆಯಬೇಕು.

**8. ಪ್ರಬಂಧ ರಚನೆ ಮತ್ತು ಮೌಖಿಕ ಪರೀಕ್ಷೆ**

ಸಂಶೋಧನ ಪ್ರಬಂಧವನ್ನು ಸಂಸ್ಕೃತ ಮಾಧ್ಯಮದಲ್ಲಿ ರಚಿಸಬೇಕು. ಸಂಶೋಧನೆಯ ಪ್ರಬಂಧವನ್ನು ದ್ವಿತೀಯ ಹಂತದ ಕೊನೆಯಲ್ಲಿ ವಿಶ್ವವಿದ್ಯಾಲಯಕ್ಕೆ ಸಮರ್ಪಿಸಬೇಕು. ವಿಶ್ವವಿದ್ಯಾಲಯವು ಪ್ರಬಂಧದ ಮೌಲ್ಯಮಾಪನದ ಅನಂತರ ಮೌಖಿಕ ಪರೀಕ್ಷೆಯನ್ನು ನಡೆಸಬೇಕು.

**9. ಬೋಧನಾ ಮತ್ತು ಮಾರ್ಗದರ್ಶನ ಅವಧಿಗಳು**

**9.1 ಪ್ರಥಮ ಹಂತ:** ಎಲ್ಲಾ ಎಂ.ಫಿಲ್ ವಿದ್ಯಾರ್ಥಿಗಳಿಗೆ ಸಾಮಾನ್ಯ ಪತ್ರಿಕೆಯಾದ 'ಸಂಶೋಧನಾ ಪದ್ಧತಿ'ಯಲ್ಲಿ ವಾರಕ್ಕೆ ಕನಿಷ್ಠ 3 ಗಂಟೆಗಳ ಕಾಲ ಬೋಧನಾ ಅವಧಿಯನ್ನು ನಿಗದಿಗೊಳಿಸಲಾಗಿದೆ.

ವಿಶೇಷ ಪತ್ರಿಕೆಗೆ ಸಂಬಂಧಪಟ್ಟ ವಿಷಯದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಕನಿಷ್ಠ ವಾರಕ್ಕೆ ಮೂರು ಗಂಟೆಗಳ ಕಾಲ ತನ್ನ ಮಾರ್ಗದರ್ಶಕರಿಂದ ಮಾರ್ಗದರ್ಶನವನ್ನು ಪಡೆಯಬೇಕು.

**9.2 ದ್ವಿತೀಯ ಹಂತ:** ಪ್ರತಿಯೊಬ್ಬ ವಿದ್ಯಾರ್ಥಿಯೂ ವಾರದಲ್ಲಿ ಕನಿಷ್ಠ ಆರು ಗಂಟೆಗಳ ಕಾಲ ತನ್ನ ಸಂಶೋಧನ ಪ್ರಬಂಧದ ರಚನೆಗೆ ಸಂಬಂಧಿಸಿದಂತೆ ತನ್ನ ಮಾರ್ಗದರ್ಶಕರಿಂದ ಮಾರ್ಗದರ್ಶನ ಪಡೆಯಬೇಕು.

**10. ಹಾಜರಿ**

ಎಂ.ಫಿಲ್ (ವಿಶಿಷ್ಟಾಚಾರ್ಯ) ಕಾರ್ಯಕ್ರಮಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಭಾಗ–1 ಮತ್ತು ಭಾಗ–2 ಪರೀಕ್ಷೆಗಳಿಗಾಗಿ ಅರ್ಹತೆಯನ್ನು ಪಡೆಯಲು ಕನಿಷ್ಠ 75% ಹಾಜರಾತಿಯನ್ನು ಹೊಂದಿರಬೇಕು.

**11. ಬೋಧನೆ, ಪರೀಕ್ಷೆ ಮತ್ತು ಇತರ ಶುಲ್ಕಗಳು**

11.1 ಪ್ರತಿಯೊಬ್ಬ ಎಂ.ಫಿಲ್ (ವಿಶಿಷ್ಟಾಚಾರ್ಯ) ವಿದ್ಯಾರ್ಥಿಯು ಕಾಲಕಾಲಕ್ಕೆ ವಿಶ್ವವಿದ್ಯಾಲಯವು ನಿಯತಗೊಳಿಸುವ ಬೋಧನೆ, ಪರೀಕ್ಷೆ ಮತ್ತು ಇತರ ಶುಲ್ಕಗಳನ್ನು ವಿಶ್ವವಿದ್ಯಾಲಯಕ್ಕೆ ಪಾವತಿ ಮಾಡಬೇಕು.

10.2 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಪ್ರಸ್ತುತ ಚಾಲನೆಯಲ್ಲಿರುವ ಸರಕಾರದ ಆದೇಶಾನುಸಾರ ಶುಲ್ಕ ಪಾವತಿಯಲ್ಲಿ ವಿನಾಯಿತಿ ನೀಡುವುದು.

## 12. ಪರೀಕ್ಷೆಗೆ ನೋಂದಣಿ ಮತ್ತು ಮೌಲ್ಯಮಾಪನ

12.1 ಪ್ರತಿಯೊಬ್ಬ ಎಂ.ಫಿಲ್ ವಿದ್ಯಾರ್ಥಿಯು ಅಧ್ಯಕ್ಷರ / ಕಾಲೇಜುಗಳ ಮುಖ್ಯಸ್ಥರ / ಸಂಸ್ಥೆಯ ನಿರ್ದೇಶಕರ ಮೂಲಕ ನಿಯಮಿತ ನಮೂನೆಯ ಅರ್ಜಿಯನ್ನು ಕುಲಸಚಿವರಿಗೆ (ಪರೀಕ್ಷಾಂಗ) ನಿಗದಿತ ಅವಧಿಯಲ್ಲಿ ಸಮರ್ಪಿಸಬೇಕು.

12.2 ಮೇಲೆ ಕೊಟ್ಟ 9.1, 9.2, 10, 11.1 ಮತ್ತು 11.2 ಕಂಡಿಕೆಗಳಲ್ಲಿ ಹೇಳಿದ ನಿಯಮವನ್ನು ಪಾಲಿಸಿದ ಅರ್ಹ ಎಂ.ಫಿಲ್ ವಿದ್ಯಾರ್ಥಿಗಳಿಗೆ ಮಾತ್ರ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶ ನೀಡಲಾಗುತ್ತದೆ.

12.3 ಎಂ.ಫಿಲ್ (ವಿಶಿಷ್ಟಾಚಾರ್ಯ) ವಾರ್ಷಿಕ ಪರೀಕ್ಷೆಯನ್ನು ಶೈಕ್ಷಣಿಕ ವರ್ಷದ ಪ್ರತಿ ಹಂತದ ಅಂತ್ಯದಲ್ಲಿ ನಡೆಸಲಾಗುವುದು.

## 13. ಪರೀಕ್ಷಾ ಮಂಡಳಿಯ ರಚನೆ

13.1 ಆಯಾ ವಿಷಯಗಳ ಅಧ್ಯಯನ ಮಂಡಳಿಗಳ ಅಧ್ಯಕ್ಷರು, ಸಂಬಂಧಿಸಿದ ವಿಷಯಗಳ ಮಾರ್ಗದರ್ಶಕರ ಸಲಹೆಯನ್ನು ಪಡೆದು, ಅಧ್ಯಯನ ಮಂಡಳಿಯ ಸಮ್ಮತಿಯೊಡನೆ ಅರ್ಹ ಪರೀಕ್ಷಕರ ಪಟ್ಟಿಯನ್ನು ವಿಶ್ವವಿದ್ಯಾಲಯಕ್ಕೆ ಸಮರ್ಪಿಸಬೇಕು.

13.2 ಆ ಪಟ್ಟಿಯಿಂದ ಕುಲಪತಿಗಳ ನೇತೃತ್ವದಲ್ಲಿರುವ ಪರೀಕ್ಷಾ ಮಂಡಳಿಯ ಸದಸ್ಯರ ಆಯ್ಕೆ ಸಮಿತಿಯು (BOAE) ಪರೀಕ್ಷಾ ಮಂಡಳಿಯನ್ನು ರಚಿಸಬೇಕು. ಈ ಆಯ್ಕೆ ಸಮಿತಿಯಲ್ಲಿ ಆಯಾ ವಿಭಾಗದ ಅಧ್ಯಕ್ಷರು ಮತ್ತು ಆಯಾ ನಿಕಾಯದ ಡೀನರು ಇರಬೇಕು. ಅಧ್ಯಯನಾಂಗದ ನಿರ್ದೇಶಕರು ಸಂಚಾಲಕರಾಗಿರುತ್ತಾರೆ.

13.3 ಎಂ.ಫಿಲ್. (ವಿಶಿಷ್ಟಾಚಾರ್ಯ) ಪರೀಕ್ಷಾ ಮಂಡಳಿಯಲ್ಲಿ ಇರಬೇಕಾದವರು

| | |
|---|---|
| 1. ಆಯಾ ವಿಷಯದ ಮಾರ್ಗದರ್ಶಕರು | ಅಧ್ಯಕ್ಷರು |
| 2. ವಿಭಾಗದ ಹಿರಿಯ ಪ್ರಾಧ್ಯಾಪಕರು | ಸದಸ್ಯರು |
| 3. ಒಬ್ಬ ಬಾಹ್ಯ ವಿಷಯತಜ್ಞರು | ಸದಸ್ಯರು |

**ಟಿಪ್ಪಣಿ:** ವಿಶ್ವವಿದ್ಯಾಲಯದ ವಿಭಾಗದಲ್ಲಿ ಮಾರ್ಗದರ್ಶಕರ ಹೊರತಾಗಿ ಹಿರಿಯ ಪ್ರಾಧ್ಯಾಪಕರಿಲ್ಲದಿದ್ದಲ್ಲಿ ವಿಶ್ವವಿದ್ಯಾಲಯದ ಹೊರಗಿನ ಮತ್ತೊಬ್ಬ ವಿಷಯತಜ್ಞರನ್ನು ಕುಲಪತಿಗಳ ಅನುಮತಿ ಪಡೆದು ನೇಮಕ ಮಾಡಬಹುದು.

## 14. ಮೌಲ್ಯಮಾಪನ ವ್ಯವಸ್ಥೆ

14.1 ಪ್ರತಿಯೊಂದು ಪತ್ರಿಕೆಯನ್ನು / ಸಂಶೋಧನಾ ಪ್ರಬಂಧವನ್ನು ಇಬ್ಬರು ಪ್ರತ್ಯೇಕ ಮೌಲ್ಯಮಾಪನ ಮಾಡಬೇಕು.
ಇಬ್ಬರಲ್ಲಿ ಒಬ್ಬರು ಆಂತರಿಕ ಮೌಲ್ಯಮಾಪಕರು ಹಾಗೂ ಮತ್ತೊಬ್ಬರು ಬಾಹ್ಯ ಮೌಲ್ಯಮಾಪಕರಾಗಿರಬೇಕು.

14.2 ಪ್ರತಿಯೊಬ್ಬ ಮೌಲ್ಯಮಾಪಕರು ಪ್ರತಿಯೊಂದು ಪತ್ರಿಕೆ/ಸಂಶೋಧನಾ ಪ್ರಬಂಧದ ಅಂಕಪಟ್ಟಿಯನ್ನು ಬೇರೆಯಾಗಿ ಮುದ್ರಾಂಕಿತ ಕವರುಗಳಲ್ಲಿ ಕುಲಸಚಿವರಿಗೆ (ಮೌಲ್ಯಮಾಪನ) ಕಳುಹಿಸಿಕೊಡಬೇಕು.

14.3 ಇಬ್ಬರು ಮೌಲ್ಯಮಾಪಕರು ಪ್ರತಿ ಪತ್ರಿಕೆ/ಸಂಶೋಧನಾ ಪ್ರಬಂಧಕ್ಕೆ ನೀಡಿದ ಅಂಕಗಳಲ್ಲಿ ಸರಾಸರಿ ಅಂಕಗಳು ಪ್ರತಿಯೊಂದು ಪತ್ರಿಕೆಯ/ ಸಂಶೋಧನಾ ಪ್ರಬಂಧದ ಅಂತಿಮ ಅಂಕಗಳೆಂದು ನಿರ್ಣಯಿಸಬೇಕು.

14.4 ಒಂದು ಪಕ್ಷ ಇಬ್ಬರು ಮೌಲ್ಯಮಾಪಕರು ನೀಡಿದ ಅಂಕಗಳಲ್ಲಿ 20% ಅಥವಾ ಹೆಚ್ಚು ವ್ಯತ್ಯಾಸ ಬಂದಲ್ಲಿ ಅನುಮೋದಿತ ಪರೀಕ್ಷಕರ ಪಟ್ಟಿಯಿಂದ ಆಯ್ದ ಮೂರನೆಯ ಮೌಲ್ಯಮಾಪಕರಿಂದ ವಿಶ್ವವಿದ್ಯಾಲಯವು ಆ ಪತ್ರಿಕೆ/ಸಂಶೋಧನಾ ಪ್ರಬಂಧದ ಮೌಲ್ಯಮಾಪನ ಮಾಡಿಸಬೇಕು. ಅವರು ಮಾಡಿದ ಮೌಲ್ಯಮಾಪನವೇ ಅಂತಿಮವಾಗಿರಬೇಕು.

## 15. ಫಲಿತಾಂಶ ಮತ್ತು ಶ್ರೇಣಿಗಳ ಪ್ರಕಟಣೆ

15.1 ಉತ್ತೀರ್ಣತೆಗೆ ಪ್ರತಿಯೊಂದು ಪತ್ರಿಕೆ ಹಾಗೂ ಸಂಶೋಧನ ಪ್ರಬಂಧದಲ್ಲಿ ಕನಿಷ್ಠ 45% ಅಂಕಗಳು ಬಂದಿರಬೇಕು.

15.2 ಶ್ರೇಣಿಗಳು:

| | | |
|---|---|---|
| (1) | 50% ಕ್ಕಿಂತ ಹೆಚ್ಚು 60% ಕ್ಕಿಂತ ಕಡಿಮೆ | ದ್ವಿತೀಯ ಶ್ರೇಣಿ |
| (2) | 60% ಕ್ಕಿಂತ ಹೆಚ್ಚು 70% ಕ್ಕಿಂತ ಕಡಿಮೆ | ಪ್ರಥಮ ಶ್ರೇಣಿ |
| (3) | 70% ಕ್ಕಿಂತ ಹೆಚ್ಚು | ವೈಶಿಷ್ಟ್ಯ ಶ್ರೇಣಿ |

15.3 ಫಲಿತಾಂಶ ಉತ್ತಮಪಡಿಸಲು ಪುನಃ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿಲ್ಲ.

## 16. ಮಾರ್ಗದರ್ಶಕರು

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಮಾರ್ಗದರ್ಶಕರು ಎಂ.ಫಿಲ್. (ವಿಶಿಷ್ಟಾಚಾರ್ಯ) ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಬಹುದು. ಆ ಮಾನ್ಯತೆಗೆ ಅರ್ಹರಾದವರು:

16.1 ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಘಟಕ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪಿಎಚ್.ಡಿ. ಪಡೆದು 3 ವರ್ಷ ಬೋಧನಾನುಭವ ಹೊಂದಿದ ಪ್ರಾಧ್ಯಾಪಕರು, ಸಹಪ್ರಾಧ್ಯಾಪಕರು ಮತ್ತು ಸಹಾಯಕ ಪ್ರಾಧ್ಯಾಪಕರು.

16.2 ಪಿಎಚ್.ಡಿ. ಪಡೆದು ಕನಿಷ್ಠ 3 ವರ್ಷಗಳ ಬೋಧನಾನುಭವವನ್ನು ಹೊಂದಿದ ಪದವಿ ಕಾಲೇಜುಗಳ ಸಂಸ್ಕೃತ ಸಹಾಯಕ ಪ್ರಾಧ್ಯಾಪಕರು.

16.3 ಕರ್ನಾಟಕದ ಇತರ ವಿಶ್ವವಿದ್ಯಾಲಯಗಳ ಸಂಸ್ಕೃತ ವಿಭಾಗದ ಪಿಎಚ್.ಡಿ. ಪಡೆದು 3 ವರ್ಷ ಬೋಧನಾನುಭವ ಹೊಂದಿದ ಪ್ರಾಧ್ಯಾಪಕರು, ಸಹ ಮತ್ತು ಸಹಾಯಕ ಪ್ರಾಧ್ಯಾಪಕರು.

16.4 ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಸಂಸ್ಕೃತ ಕ್ಷೇತ್ರದಲ್ಲಿ ಪ್ರಗತ ಸಂಶೋಧನೆಗೆ ಮಾನ್ಯತೆ ಪಡೆದ ಸಂಸ್ಥೆ/ಕೇಂದ್ರಗಳ 16.1, 2, 3 ರಂತೆ ವಿದ್ಯಾರ್ಹತೆ ಮತ್ತು ಅನುಭವವುಳ್ಳ ನಿರ್ದೇಶಕರು/ಉಪ ನಿರ್ದೇಶಕರು/ಸಂಶೋಧಕರು ಮುಂತಾದವರು.

ಮಾರ್ಗದರ್ಶಕರನ್ನಾಗಿ ಮಾನ್ಯತೆ ನೀಡಲು ವಿಶ್ವವಿದ್ಯಾಲಯವು ಒಂದು ತಜ್ಞರ ಸಮಿತಿಯನ್ನು ನೇಮಿಸಿ, ಅದರ ಶಿಫಾರಸ್ಸಿಗೆ ಅನುಗುಣವಾಗಿ ನಿರ್ಧಾರವನ್ನು ತೆಗೆದುಕೊಳ್ಳಬೇಕು.

**17.** ಈ ನಿಯಮಾವಳಿಯಲ್ಲಿ ಕಾಣಿಸಿದ ಯಾವುದೇ ವಿಷಯವನ್ನು ಕಾರ್ಯಗತಗೊಳಿಸುವಲ್ಲಿ ಸಮಸ್ಯೆ/ಗೊಂದಲಗಳುಂಟಾದಲ್ಲಿ ಅದನ್ನು ಸರಿಪಡಿಸುವ ಬಗೆಗೆ ಮಾನ್ಯ ಕುಲಪತಿಗಳಿಗೆ ಮನವಿ ಸಲ್ಲಿಸಬೇಕು. ಅವರು ಪ್ರಶಾಸನ ಸಮಿತಿಯೊಂದಿಗೆ ಸಮಾಲೋಚಿಸಿ ತೆಗೆದುಕೊಂಡ ನಿರ್ಧಾರವು ಆ ವಿಷಯದಲ್ಲಿ ಅಂತಿಮವಾಗಿರುತ್ತದೆ.

**ಅಧ್ಯಯನಾಂಗ**
**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
**ಚಾಮರಾಜಪೇಟೆ, ಬೆಂಗಳೂರು – ೫೬೦೦೧೮.**

## ಎಂ.ಫಿಲ್. (ವಿಶಿಷ್ಟಾಚಾರ್ಯ) ಪ್ರವೇಶ ಪ್ರಕ್ರಿಯೆಯ ವೇಳಾಪಟ್ಟಿ

| ಕ್ರ.ಸಂ. | ವಿವರ | ಅವಧಿ/ದಿನಾಂಕ |
|---|---|---|
| 1. | ಅಧ್ಯಯನಾಂಗದಿಂದ ಆವೇದನ ಪತ್ರ ನೀಡಿಕೆ | ಮೇ 31 |
| 2. | ಭರ್ತಿ ಮಾಡಿದ ಆವೇದನ ಪತ್ರ ಸ್ವೀಕಾರ | ಜೂನ್ ಮೊದಲ ವಾರ |
| 3. | ಪ್ರವೇಶ ಪರೀಕ್ಷೆ ಬರೆಯಲು ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟ | ಜೂನ್ ಎರಡನೇ ವಾರ |
| 4. | ಪ್ರವೇಶ ಪರೀಕ್ಷೆ | ಜೂನ್ ಮೂರನೇ ವಾರ |
| 5. | ಮೌಖಿಕ ಪರೀಕ್ಷೆ | ಜೂನ್ ನಾಲ್ಕನೇ ವಾರ |
| 6. | ಫಲಿತಾಂಶ<br>(ಕೋರ್ಸ್‌ಗೆ ಆಯ್ಕೆಯಾದವರ ಅಂತಿಮ ಪಟ್ಟಿ ಪ್ರಕಟಣೆ) | ಜೂನ್ ಅಂತಿಮ ದಿನ |
| 7. | ನೋಂದಣಿ | ಜುಲೈ ಮೊದಲ ವಾರ |
| 8. | ದ್ವಿತೀಯ ಪಟ್ಟಿ ಪ್ರಕಟಣೆ | ಜುಲೈ ಎರಡನೇ ವಾರ |
| 9. | ತರಗತಿ ಪ್ರಾರಂಭ | ಜುಲೈ ಮೂರನೇ ವಾರ |
| 10. | ವಾರ್ಷಿಕ ಪರೀಕ್ಷೆ | ಜನವರಿ |
| 11. | ಪ್ರಬಂಧ ಮಂಡನೆ | ಜೂನ್ |

### ೧. ಶುಲ್ಕ ವಿವರ:

| ಕ್ರ.ಸಂ. | ಶುಲ್ಕ ವಿವರ | ಮೊತ್ತ |
|---|---|---|
| ೧. | ಆವೇದನ ಪತ್ರ ಶುಲ್ಕ | ೩೦೦/– |
| ೨. | ನೋಂದಣಿ ಶುಲ್ಕ | ೫೦೦/– |
| ೩. | ಬೋಧನಾ ಶುಲ್ಕ | ೧೫೦೦/– |
| ೪. | ಪರೀಕ್ಷಾ ಶುಲ್ಕ | ೧೦೦೦/– |
| ೫. | ಘಟಿಕೋತ್ಸವದ ಪ್ರಮಾಣಪತ್ರ<br>(ಕನ್ನಡ ಮತ್ತು ಇಂಗ್ಲಿಷ್) | ೫೦೦/– |
| ೬. | ಗ್ರಂಥಾಲಯ ಶುಲ್ಕ | ೨೫೦/– |
| ೭. | ಮರುಪರೀಕ್ಷೆ ಶುಲ್ಕ ಪ್ರತಿ ಪತ್ರಿಕೆಗೆ | ೫೦೦/– |

| | | |
|---|---|---|
| ೮. | ಚಾಲೆಂಜ್ ಮೌಲ್ಯಮಾಪನ ಶುಲ್ಕ ನಾಲ್ಕು ಪತ್ರಿಕೆಗಳಿಗೆ | ೪೦೦೦/- |
| | ಒಂದು ಪತ್ರಿಕೆಗೆ | ೫೦೦/- |
| ೯. | ನಿಬಂಧ ಮರುಸಲ್ಲಿಕೆ ಶುಲ್ಕ | ೧೦೦೦/- |

ಎಂ.ಫಿಲ್. ಆವೇದನ ಪತ್ರ ಶುಲ್ಕ ಸಾಮಾನ್ಯ ವರ್ಗ ರೂ. ೩೦೦/- (ಮೂರುನೂರು ರೂ.ಗಳು), ಪ.ಜಾ., ಪ.ವರ್ಗ ಮತ್ತು ಪ್ರವರ್ಗ-೧ ಅಭ್ಯರ್ಥಿಗಳಿಗೆ ರೂ. ೧೫೦/- (ಒಂದುನೂರ ಐವತ್ತು ರೂ.ಗಳು)ಗಳನ್ನು **'ಹಣಕಾಸು ಅಧಿಕಾರಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮'** ಇವರ ಹೆಸರಿಗೆ ಡಿ.ಡಿ. ಪಾವತಿಸಿ ಆವೇದನ ಪತ್ರಗಳನ್ನು ಪಡೆಯಬಹುದಾಗಿದೆ.

## ೨. ಆವೇದನ ಪತ್ರ ಪಡೆಯುವಿಕೆ ಮತ್ತು ಸಲ್ಲಿಕೆ ವಿವರ:

ಆವೇದನ ಪತ್ರವನ್ನು ನೇರವಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಹಣಕಾಸು ವಿಭಾಗದಲ್ಲಿ ಶುಲ್ಕ ಪಾವತಿಸಿ ಅಧ್ಯಯನಾಂಗದಿಂದ ಪಡೆಯಬಹುದಾಗಿದೆ.

ಅಥವಾ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವೆಬ್‌ಸೈಟ್ www.ksu.ac.in ನಿಂದ ಡೌನ್‌ಲೋಡ್ ಮಾಡಿ ಅಥವಾ ಆವೇದನ ಪತ್ರವನ್ನು ನಿಗದಿತ ದಿನಾಂಕದೊಳಗಾಗಿ ಪಡೆದು, ನಿಗದಿತ ಶುಲ್ಕದ ಡಿ.ಡಿ.ಯೊಂದಿಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ತಲುಪಿಸಬೇಕು.

ಭರ್ತಿ ಮಾಡಿದ ಆವೇದನ ಪತ್ರಗಳನ್ನು ಕುಲಸಚಿವರು/ನಿರ್ದೇಶಕರು, ಅಧ್ಯಯನಾಂಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು - ೫೬೦೦೧೮ ಇವರಿಗೆ ಅಭ್ಯರ್ಥಿಗಳು ನೇರವಾಗಿ ಅಥವಾ ಅಂಚೆ ಮೂಲಕ ನಿಗದಿತ ಅವಧಿಯೊಳಗೆ ತಲುಪುವಂತೆ ಸಲ್ಲಿಸುವುದು. ನಂತರ ಬಂದ ಆವೇದನ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.

ಮಾನ್ಯತಾ ಕೇಂದ್ರದ ಅಭ್ಯರ್ಥಿಗಳು ಭರ್ತಿ ಮಾಡಿದ ಆವೇದನ ಪತ್ರಗಳನ್ನು **ಕುಲಸಚಿವರು/ನಿರ್ದೇಶಕರು, ಅಧ್ಯಯನಾಂಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು - ೫೬೦೦೧೮** ಇವರಿಗೆ ಸಲ್ಲಿಸಬಹುದು.

## ಎಂ.ಫಿಲ್. (ವಿಶಿಷ್ಟಾಚಾರ್ಯ) ತರಗತಿಗೆ ಲಭ್ಯವಿರುವ ಸ್ಥಾನಗಳ ಸಂಖ್ಯೆ

| **ನಿಕಾಯಗಳು/ವಿಭಾಗಗಳು** | **ಲಭ್ಯವಿರುವ ಸ್ಥಾನಗಳು** |
|---|---|
| ವೇದಾಧ್ಯಯನಗಳ ನಿಕಾಯ | ೬ |
| ಭಾಷಾ ನಿಕಾಯ | ೮ |
| ಶಾಸ್ತ್ರಗಳ ನಿಕಾಯ | ೮ |
| ವೇದಾಂತ ನಿಕಾಯ | ೮ |
| **ಒಟ್ಟು** | **೩೦** |

**ಸೂಚನೆ:**

೧. ಸರ್ಕಾರದ / ವಿಶ್ವವಿದ್ಯಾಲಯದ ನಿಯಮಾನುಸಾರ ಮೀಸಲಾತಿಯನ್ನು ಪಾಲಿಸಲಾಗುತ್ತದೆ.

೨. ಒಂದು ನಿಕಾಯದಿಂದ ಇನ್ನೊಂದು ನಿಕಾಯಕ್ಕೆ ಸ್ಥಾನಗಳನ್ನು ವರ್ಗಾಯಿಸುವ ಹಕ್ಕು ವಿಶ್ವವಿದ್ಯಾಲಯಕ್ಕೆ ಇರುತ್ತದೆ.

## ಪ್ರವೇಶ ಪರೀಕ್ಷೆಯ ಮಾದರಿ

* ಪ್ರವೇಶ ಪರೀಕ್ಷೆಯು ಸಂಪೂರ್ಣವಾಗಿ ಸಂಸ್ಕೃತ ಭಾಷಾ ಮಾಧ್ಯಮದಲ್ಲಿ ಲಿಖಿತ ಪರೀಕ್ಷೆಯನ್ನು ಒಳಗೊಂಡಿರುತ್ತದೆ. ಈ ಪರೀಕ್ಷೆಯನ್ನು ಬೆಂಗಳೂರಿನ ಕೇಂದ್ರದಲ್ಲಿ ಮಾತ್ರ ನಡೆಸಲಾಗುವುದು.

* ನೂರು ಅಂಕಗಳ ಪತ್ರಿಕೆಯಲ್ಲಿ ಈ ಕೆಳಕಂಡ ವಿಭಾಗಗಳಿರುತ್ತವೆ:

| | |
|---|---|
| **ಮೊದಲ ವಿಭಾಗ** | |
| ಭಾಷಾವ್ಯುತ್ಪತ್ತಿ (ಏಕಾಂಕ ಪ್ರಶ್ನೆಗಳು) | ೨೦ ಅಂಕ |
| ಸಾಮಾನ್ಯ ದರ್ಶನ/ಶಾಸ್ತ್ರ/ವೇದ/ಇತ್ಯಾದಿ ವಿಷಯ (ಏಕಾಂಕ ಪ್ರಶ್ನೆಗಳು) | ೩೦ ಅಂಕ |
| **ಎರಡನೆಯ ವಿಭಾಗ** | |
| ಸಾಮಾನ್ಯ ವಿಷಯದಲ್ಲಿ ಟಿಪ್ಪಣಿ/ಪ್ರಬಂಧ | ೨೦ ಅಂಕ |
| ಅಧ್ಯಯನ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯದಲ್ಲಿ ಪ್ರಬಂಧ | ೩೦ ಅಂಕ |

## ಮಾನಿತ ಸ್ನಾತಕೋತ್ತರ ಅಧ್ಯಯನ ಕೇಂದ್ರಗಳು

**ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು**
ಪಂಪಮಹಾಕವಿ ರಸ್ತೆ,
ಚಾಮರಾಜಪೇಟೆ, ಬೆಂಗಳೂರು-೧೮.

**ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು**
ನ್ಯೂ ಸಯ್ಯಾಜಿರಾವ್ ರಸ್ತೆ,
ಮೈಸೂರು - ೫೭೦೦೨೪

**ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜು,**
ಗೋಕರ್ಣ, ಕುಮಟ ತಾಲ್ಲೂಕು,
ಉ.ಕ. ಜಿಲ್ಲೆ

**ಸರ್ಕಾರಿ ಸಂಸ್ಕೃತ ಕಾಲೇಜು**
ಮೇಲುಕೋಟೆ - ೫೭೧೪೩೧,
ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ

**ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಕಾಲೇಜು**
ಶ್ರೀ ಆದಿಚುಂಚನಗಿರಿ ಕ್ಷೇತ್ರ,
ನಾಗಮಂಗಲ ತಾಲ್ಲೂಕು
ಮಂಡ್ಯ ಜಿಲ್ಲೆ - ೫೭೧೮೧೧

**ಶ್ರೀ ಸಿದ್ಧಲಿಂಗೇಶ್ವರ ವೇದಸಂಸ್ಕೃತ ಕಾಲೇಜು**
ಸಿದ್ಧಗಂಗಾ ಮಠ
ತುಮಕೂರು - ೫೭೨೧೦೪

**ಪೂರ್ಣಪ್ರಜ್ಞ ಸಂಸ್ಕೃತ ಕಾಲೇಜು**
ಪೂರ್ಣಪ್ರಜ್ಞ ನಗರ, ಕತ್ತರಿಗುಪ್ಪೆ
ಮುಖ್ಯರಸ್ತೆ, ಬೆಂಗಳೂರು - ೨೮

**ಸಿ.ಎಲ್.ವೈ. ಸಂಸ್ಕೃತ ಕಾಲೇಜು**
ಕುಮಾರೇಶ್ವರ ನಗರ, ಬೆಳಗಾವಿ ರಸ್ತೆ
ಧಾರವಾಡ - ೫೮೦೦೦೮.

**ಶ್ರೀ ಶ್ರೀಮಾತಾ ಸಂಸ್ಕೃತ ಕಾಲೇಜು**
ಉಮ್ಮಚಗಿ, ಯಲ್ಲಾಪುರ-೫೮೧೩೪೭
ಉತ್ತರ ಕನ್ನಡ ಜಿಲ್ಲೆ

**ಶ್ರೀ ರಾಜರಾಜೇಶ್ವರೀ ಸಂಸ್ಕೃತ ಕಾಲೇಜು**
ಸೋಂದಾ ಸ್ವರ್ಣವಲ್ಲೀ ಮಠ,
ಮಠದೇವಳ ಅಂಚೆ,
ಶಿರಸಿ ತಾಲ್ಲೂಕು, ಉ.ಕ. ಜಿಲ್ಲೆ

**ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಕಾಲೇಜು**
ಸುಬ್ರಹ್ಮಣ್ಯ ಸುರಕಟ್ಟೆ,
ಹೊನ್ನಾವರ-೫೮೧೩೩೪, ಉ.ಕ. ಜಿಲ್ಲೆ

**ಶ್ರೀಮನ್ಮಧ್ವ ಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಕಾಲೇಜು**
ಉಡುಪಿ - ೫೭೬೧೦೧

## ಮಾನಿತ ಸಂಶೋಧನಾ ಕೇಂದ್ರಗಳು

**ವಿದ್ಯಾಧೀಶ ಸ್ನಾತಕೋತ್ತರ ಸಂಸ್ಕೃತ ಶೋಧಕೇಂದ್ರ**
ದ್ವೈತವೇದಾಂತ ಅಧ್ಯಯನ ಮತ್ತು ಸಂಶೋಧನಾ ಪ್ರತಿಷ್ಠಾನ
ಉತ್ತರಾದಿಮಠ ರಸ್ತೆ, ಬಸವನಗುಡಿ, ಬೆಂಗಳೂರು - ೫೬೦೦೦೪.

**ತತ್ತ್ವಸಂಶೋಧನ ಸಂಸತ್**
ರಥಬೀದಿ, ಉಡುಪಿ